ಕರ್ನಾಟಕ ಸರ್ಕಾರ

ಸಂ.ಗ್ರಾಅಪ 115 ಗ್ರಾಪಸ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 28.12.2011

## ಸುತ್ತೋಲೆ

ವಿಷಯ: 2011-12ನೇ ಸಾಲಿನಲ್ಲಿ 13ನೇ ಆರ್ಥಿಕ ಆಯೋಗದ ಅನುದಾನವನ್ನು ಪಡೆಯಲು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ.

13ನೇ ಆರ್ಥಿಕ ಆಯೋಗದ ಶಿಫಾರಸ್ಸಿನನ್ವಯ 5 ವರ್ಷಗಳ ಅವಧಿಗೆ ಅಂದರೆ 2010-11ನೇ ಸಾಲಿನಿಂದ 2014-15ನೇ ಸಾಲಿನವರೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಅನುದಾನವು ವಾರ್ಷಿಕವಾಗಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ರಾಜ್ಯದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳಿಗೆ 10:20:70 ಅನುಪಾತದಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗು ಗ್ರಾಮ ಪಂಚಾಯತಿಗಳಿಗೆ ಅನುಕ್ರಮವಾಗಿ ಬಿಡುಗಡೆ ಮಾಡಲಾಗುತ್ತಿದೆ. ಈ ಅನುದಾನವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಹುತೇಕ ಅನಿಬಂಧಿತ ಅನುದಾನವಾಗಿರುತ್ತದೆ. ಈ ಅನುದಾನವನ್ನು ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಬಹುದಾಗಿದೆ. ಈ ಅನುದಾನವನ್ನು ಎರಡು ವಿಭಾಗಗಳಾಗಿ ಬಿಡುಗಡೆ ಮಾಡಲಾಗುತ್ತಿದೆ.

(1) ಸಾಮಾನ್ಯ ಮೂಲ ಅನುದಾನ (General Basic Grant),

(2) ಸಾಮಾನ್ಯ ನಿರ್ವಹಣಾ ಅನುದಾನ (General Performance Grant).

2010-11ನೇ ಸಾಲಿನಲ್ಲಿ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡಲು ನಿಗದಿಪಡಿಸಿದ್ದ ಮಾನದಂಡದಲ್ಲಿಯೇ ವಾರ್ಷಿಕ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2011-12ನೇ ಸಾಲಿಗೆ ಈ ಅನುದಾನವನ್ನು ಬಿಡುಗಡೆ ಮಾಡಲು ಕನಿಷ್ಠ ಮಾನದಂಡಗಳನ್ನು ನಿಗದಿಪಡಿಸಬೇಕೆಂದು ಕೇಂದ್ರ ಹಣಕಾಸು ಆಯೋಗ ಹಾಗು ರಾಜ್ಯ ಆರ್ಥಿಕ ಇಲಾಖೆ ಸೂಚಿಸಿದ್ದರ ಅನ್ವಯ ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ, ತಾಲ್ಲೂಕು ಪಂಚಾಯತಿಗಳಿಗೆ ಹಾಗು ಗ್ರಾಮ ಪಂಚಾಯತಿಗಳಿಗೆ ಪಂಚಾಯತ್ ರಾಜ್ ಅಧಿನಿಯಮದ ಅನುಷ್ಠಾನ ಹಾಗು ಉತ್ತರದಾಯಿತ್ವವನ್ನು ತೆರುವ ಉದ್ದೇಶದಿಂದ 2011-12ನೇ ಸಾಲಿನಲ್ಲಿ ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಬಿಡುಗಡೆ ಮಾಡಲು ಈ ಕೆಳಕಂಡಂತೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಈ ಮಾನದಂಡಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಲು ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸೂಚಿಸಿದೆ.

**ಜಿಲ್ಲಾ ಪಂಚಾಯತ್:-**

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 180 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ 2 ತಿಂಗಳಿಗೆ ಒಂದು ಬಾರಿ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 6 ಸಭೆಗಳು).
2. ಹಿಂದಿನ ಆರ್ಥಿಕ ವರ್ಷದ ಕ್ರೋಢಿಕೃತ ಜಿಲ್ಲಾ ಆಡಳಿತ ವರದಿಯನ್ನು ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 300ರ ಪ್ರಕಾರ ಕಾಲಮಿತಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿರಬೇಕು.

3. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 262ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
4. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 310ರ ಪ್ರಕಾರ ಜಿಲ್ಲಾ ಯೋಜನಾ ಸಮಿತಿಗಳು ರಚನೆಯಾಗಿರಬೇಕು ಹಾಗು ಹಿಂದಿನ ವರ್ಷದಲ್ಲಿ ಕನಿಷ್ಠ 3 ಸಭೆಯಾದರೂ ನಡೆಸಿರಬೇಕು (4 ಸಭೆ ನಡೆಸಲು ಅವಕಾಶವಿದೆ).
5. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 256ರ ಪ್ರಕಾರ ಜಿಲ್ಲಾ ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.
6. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.

**ತಾಲ್ಲೂಕು ಪಂಚಾಯತಿ:-**

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 141 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ 2 ತಿಂಗಳಿಗೆ ಒಂದು ಬಾರಿ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 6 ಸಭೆಗಳು).
2. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 253ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
3. ತಾಲ್ಲೂಕಿನ ಪ್ರತಿ ಗ್ರಾಮ ಪಂಚಾಯತಿಗಳ ಜಮಾಬಂಧಿಯನ್ನು ಹಿಂದಿನ ಆರ್ಥಿಕ ವರ್ಷದಲ್ಲಿ ಆಗಸ್ಟ್ 15 ರಿಂದ ಸೆಪ್ಟೆಂಬರ್ 15 ರವರೆಗೆ ಪೂರ್ಣಗೊಳಿಸಿರಬೇಕು.
4. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 247ರ ಪ್ರಕಾರ ತಾಲ್ಲೂಕು ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.
5. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.
6. ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಕಳೆದ ಆರ್ಥಿಕ ವರ್ಷದ ಕೂಲಿಕಾರರ ಆಯವ್ಯಯವನ್ನು ತಯಾರಿಸಿರಬೇಕು.

**ಗ್ರಾಮ ಪಂಚಾಯತಿ:-**

1. ಹಿಂದಿನ ಆರ್ಥಿಕ ವರ್ಷದಲ್ಲಿ, ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 52 ರಲ್ಲಿ ಉಲ್ಲೇಖಿಸಿರುವಂತೆ ಕನಿಷ್ಠ ಪಕ್ಷ ತಿಂಗಳಿಗೊಮ್ಮೆ ಸಾಮಾನ್ಯ ಸಭೆಯನ್ನು ನಡೆಸಿರಬೇಕು (ವರ್ಷಕ್ಕೆ 12 ಸಭೆಗಳು).
2. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 246ರ ಪ್ರಕಾರ ಹಿಂದಿನ ವರ್ಷದ ಆರ್ಥಿಕ ವಹಿವಾಟಿನ ಲೆಕ್ಕಪರಿಶೋಧನೆ ಆಗಿರಬೇಕು.
3. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 3ಎ ಪ್ರಕಾರ ಹಿಂದಿನ ವರ್ಷದಲ್ಲಿ ಗ್ರಾಮ ಪಂಚಾಯತಿಗಳು ಗ್ರಾಮ ಸಭೆಗಳನ್ನು ನಡೆಸಿರಬೇಕು.
4. ಹಿಂದಿನ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ 13ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಅನುದಾನ ಪೂರ್ಣ ವೆಚ್ಚವಾಗಿರಬೇಕು.
5. ಕರ್ನಾಟಕ ಪಂ.ರಾಜ್ ಅಧಿನಿಯಮ, 1993ರ ಪ್ರಕರಣ 241ರ ಪ್ರಕಾರ ಗ್ರಾಮ ಪಂಚಾಯತಿಗಳು ಹಿಂದಿನ ಆರ್ಥಿಕ ವರ್ಷದ ಬಜೆಟ್ ಅನ್ನು ತಯಾರಿಸಿರಬೇಕು.

6. ಹಿಂದಿನ ವರ್ಷದ ಒಟ್ಟು ಕಂದಾಯ ಬೇಡಿಕೆಯಲ್ಲಿ ಕನಿಷ್ಠ 40 ರಷ್ಟು ವಸೂಲಾತಿ ಮಾಡಿರಬೇಕು (ಪ್ರತಿ ವರ್ಷ ಶೇ.5 ರಷ್ಟು ಹೆಚ್ಚುವರಿಯಾಗಿ ವಸೂಲಾತಿ ಆಗಿರಬೇಕು ಅಂದರೆ 45%, 50%, 55%, 60%, 65%, 70%, 75%).

13ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ ಮಾಡಲು ಮೂಲಭೂತವಾಗಿ ಈ ಮಾನದಂಡಗಳನ್ನು ಅಳವಡಿಸಿಕೊಂಡು ಅನುದಾನ ಬಿಡುಗಡೆ ಮಾಡಲಾಗುವುದು. ಈ ಮಾನದಂಡಗಳಲ್ಲಿ ಯಾವುದೇ ಅಂಶಗಳನ್ನು ಅನುಷ್ಠಾನಗೊಳಿಸಲು ವಿಫಲರಾದಲ್ಲಿ ಅಂತಹ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಡ್ಡಾಯವಾಗಿ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

2012–13ನೇ ಸಾಲಿನಿಂದ ಸಾಮಾನ್ಯ ಮೂಲ ಅನುದಾನವನ್ನು (General Basic Grant) ಹಾಗು ಸಾಮಾನ್ಯ ನಿರ್ವಹಣಾ ಅನುದಾನ (General Performance Grant) ಬಿಡುಗಡೆ ಮಾಡಲು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಈ ಮಾನದಂಡಗಳನ್ನು ಕಡ್ಡಾಯಗೊಳಿಸಲಾಗಿದೆ.

ಈ ಷರತ್ತುಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಮು.ಕಾ.ನಿ.ಅಧಿಕಾರಿಗಳು ಪ್ರತಿ ವರ್ಷ ಸೆಪ್ಟೆಂಬರ್ ಅಂತ್ಯದೊಳಗೆ ದೃಢೀಕರಣವನ್ನು ಸರ್ಕಾರಕ್ಕೆ ಸಲ್ಲಿಸಬೇಕು.

(ಡಾ: ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾ.ಅ&ಪಂ.ರಾಜ್ ಇಲಾಖೆ.

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ).
4. ಆರ್ಥಿಕ ಇಲಾಖೆ, (ವೆಚ್ಚ–6), ಯೋಜನಾ ಇಲಾಖೆ.
5. ಕರ್ನಾಟಕ ವಿಕಾಸ/ವೆಬ್‌ಸೈಟ್/ಮಾಹಿತಿ ಕೇಂದ್ರ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ&ಪಂ.ರಾಜ್ ಇಲಾಖೆ.